SATYAVADI Founded 1917 Regd. No. M. 1299

ಸತ್ಯವಾದಿ

(ಆರ್ಮುನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 134 | ಗುರುವಾರ 24—1—46 | ಬಿಡಿ ಪ್ರತಿ 3 ಪೈ

ಈ ವರ್ಷ ಭಾರತಕ್ಕೆ ಸ್ವರಾಜ್ !

ಕ ವ ಶಿ

ಈ ವರ್ಷ ಭಾರತದ ಸ್ವರಾಜ್ಯ

ಸೂರತ್ ಜ 22— ಈಗ ಭಾರತಕ್ಕೆ ಬಂದಿರುವ ಬ್ರಿಟಿಷ್ ಪಾರ್ಲಿಮೆಂಟರೀ ನಿಯೋಗದ ಸದಸ್ಯರಲ್ಲೊಬ್ಬರಾದ ~~ಮೇಜರ್ ಸಾಟ್ಟರ್~~ದವರು ಭಾರತಕ್ಕೆ ಈ ವರ್ಷ ಸ್ವರಾಜ್ಯ ಲಭಿಸುವುದೆಂದು ನಂಬಿರುವರೆಂಬ ವಿಷಯವನ್ನು 'ಫೋರಂ' ಪತ್ರಿಕಾ ಸಂಪಾದಕರಾದ ಎಂ || ಆಲ್ವಾರವರು ಹೊರಪಡಿಸಿರುವರು.

ಫ್ರಾನ್ಸಿನ ಮುಖಂಡತ್ವಕ್ಕೆ ಒಬ್ಬ ಸೋಷಲಿಸ್ಟರೇ ?

ಪ್ಯಾರಿಸ್ ಜ 22— ನೂತನ ಫ್ರೆಂಚ್ ಸರಕಾರದ ಮುಖ್ಯಸ್ಥರಾಗಿದ್ದು ರಾಜೀನಾಮೆ ಕೊಟ್ಟ ಡಿಗಾಲರ ಸ್ಥಾನಕ್ಕೆ ಒಬ್ಬ ಸೋಷಿಯಲಿಸ್ಟರು ಚುನಾಯಿಸಲ್ಪಡುವರೆಂದು ಹೇಳಲಾಗಿದೆ.

ಭಾರತದಲ್ಲಿ ಬೈಸಿಕಲ್ ಕಾರ್ಖಾನೆಗಳು

ಬೊಂಬಾಯಿ ಜ 22— ಈಗ ಭಾರತದಲ್ಲಿ ಬೈಸಿಕಲ್‌ಗಳನ್ನು ತಯಾರಿಸುವ ಮೂರು ಕಾರ್ಖಾನೆಗಳಿವೆಯೆಂದೂ, ಇವು ವರ್ಷಕ್ಕೆ 150000 ಬೈಸಿಕಲುಗಳನ್ನು ತಯಾರಿಸಬಲ್ಲವೆಂದೂ, ಯುದ್ಧಕ್ಕೆ ಮುಂಚೆ ಭಾರತಕ್ಕೆ ವರ್ಷಕ್ಕೆ 130000ಸೈಕಲ್ಲುಗಳು ಆಮದಾಗುತ್ತಿದ್ದವೆಂದೂ ತಿಳಿಯಬಂದಿದೆ.

ನೀಲಗಿರಿಯಲ್ಲಿ ಕುದುರೆ ಜೂಜು

ಮದರಾಸು ಜ 23— ಈ ಸಾರಿ ನೀಲಗಿರಿಯಲ್ಲಿ ಕುದುರೆ ಜೂಜು ಏಪ್ರಿಲ್-ಮೇ ತಿಂಗಳುಗಳಲ್ಲಿ ನಡೆಸಲು ಏರ್ಪಾಡುಗಳು ನಡೆಯುತ್ತಿರುವುದೆಂದು ತಿಳಿಯಬಂದಿದೆ.

ನೇತಾಜಿ ಜಯಂತಿ : ಟೇರ್‌ಗ್ಯಾಸ್, ಲಾಟೀಛಾರ್ಜ್, ಗೋಲಿಬಾರ್

ಬೊಂಬಾಯಿ ಜ 23— ಶ್ರೀ ಸುಭಾಷಚಂದ್ರ ಬೋಸರ ಜಯಂತಿ ಸಂಬಂಧದ ಮೆರವಣಿಗೆ ಚದುರಿಸಲು ಟೇರ್ ಗ್ಯಾಸು ಮತ್ತು ಲಾಟೀ ಚಾರ್ಜ್ ನಡೆಯಿತು. ಕಡೆಗೆ ಗುಂಡು ಗೂಡೆತವೂ ನಡೆದು ಕೆಲವರು ಗಾಯಗೊಂಡರು.

ಮೈಸೂರಿಗೆ ಬರ್ಮಾ ಅಕ್ಕಿ

ಕೊಚ್ಚಿ ಜ 22— ಬರ್ಮಾ ಅಕ್ಕಿ ತಂದಿರುವ ಜಯವಿಷ್ಟ್ ಹಡಗು ಕೊಚ್ಚಿ ರೇವನ್ನು ತಲಪಿದೆ. ಇದರಲ್ಲಿ ಒಳಿದಿರುವ ಅಕ್ಕಿ ಮೈಕಿ ಮೈಸೂರಿಗೆ 1600 ಟನ್ ದೊರೆಯುವುದೆಂದು ಹೇಳಲಾಗಿದೆ.

ವಿದ್ಯಾ ಸಮ್ಮೇಳನ

ರಾಜ ಸಂದೇಶ

ಮೈಸೂರು, ಜ 24 — 'ನೈತಿಕ ಬಲವೇ ವಿದ್ಯೆಗೆ ಮೂಲ' ಎಂಬುದಾಗಿ ಶ್ರೀಮನ್ಮಹಾರಾಜರವರು ಈ ದಿನ ಸಚಿವಾಂಬಾ ವಿಲಾಸ ಮ್ಯಾಕ್ಸ್‌ವೆಲ್‌ನಲ್ಲಿ ಆರೋಗ್ಯ ಸಚಿವರಾದ ಡಾ || ರಾಯ್ಕರವರ ಅಧ್ಯಕ್ಷತೆಯಲ್ಲಿ ಆರಂಭವಾದ ಅಖಿಲ ಭಾರತ ಕೇಂದ್ರ ವಿದ್ಯಾ ಸಮಿತಿಯ ಸಮಾವೇಶಕ್ಕೆ ಸಂದೇಶವನ್ನು ಕಳಿಸಿರುವರು. ಕೆಲವಾಂ ಕೂರು ಮಾತ್ರಿಗಳಾದ ಸರ್. ಸಿ. ಪಿ. ರಾಮಸ್ವಾಮಯ್ಯರ್ ಮತ್ತು ಸರ್ ಎಂ. ಎಸ್. ಸರ್ಕಾರರು ಈ ಅಧಿವೇಶನಕ್ಕೆ ಸಂದೇಶಗಳನ್ನು ಕಳಿಸಿರುವರು.

ಜಯಂತ್ಯುತ್ಸವ

ಮೈಸೂರು, ಜ 24 — ವಿದ್ಯಾ ಸಚಿವ ಡಾ || ರಾಯ್ಕರ್ ಅಧ್ಯಕ್ಷತೆಯಲ್ಲಿ ಇದೇ ಮಾಘ 27 ನೇ ಭಾನುವಾರ ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲಿನ ದಿನಾಚರಣೆ ನೆರವೇರುವುದು.

ಉಪನ್ಯಾಸ

ಮೈಸೂರು, ಜ 24 — ಮೈಸೂರು ಪಶ್ವವಿದ್ಯಾನಿಲಯ ಪ್ರಚಾರೋಪನ್ಯಾಸ ಸಮಾಲೆಯ ಆಶ್ರಯದಲ್ಲಿ ಇದೇ 25 ನೆ ಶುಕ್ರವಾರ ಸಂಜೆ ಹಾಸನದ ಕಾರೋನೇಷನ್ ಇನ್‌ಸ್ಟಿಟ್ಯೂಟ್ ಹಾಲಿನಲ್ಲಿ ಪ್ಲೇಟೋ ಎಂಬ ವಿಷಯದ ಮೇಲೆ ಶ್ರೀ ಪ್ರೊ. ಕೆ. ರಾಜಾರಾವ್ ಎಂ. ಎ. ರವರು ಭಾಷಣ ಮಾಡುವರು. ಮೈಸೂರಿನ ಕಾಡುಗಳಲ್ಲಿರುವ ಹಾವುಗಳು ಎಂಬ ವಿಷಯದ ಮೇಲೆ ಶ್ರೀ ಎ. ನಾರಾಯಣರಾವ್, ಎಂ ಎಸ್‌ಸಿ ರವರು ಇದೇ ಶುಕ್ರವಾರ ತಾ || 25'ರಲ್ಲಿ ಮಂಡ್ಯದ ಪುರಭವನದಲ್ಲಿ ಭಾಷಣ ಮಾಡುವರು.

ಬೆಲ್ಲದ ಕಾಫಿ

ಮೈಸೂರು, ಜ 24 — ಸಕ್ಕರೆ ಅಭಾವ ಪ್ರಯುಕ್ತ ಮುಂದಿನ ತಿಂಗಳಿಂದ ಹಾಲು ಮುಂತಾದುವುಗಳಿಗೆ ಹೋಟಲುಗಳಲ್ಲಿ ಸಂಪೂರ್ಣ ಬೆಲ್ಲವನ್ನು ಉಪಯೋಗಿಸಬೇಕೆಂದು ಹೋಟೆಲ್ ಸಂಘ ತೀರ್ಮಾನಿಸಿರುವುದಾಗಿ ಗೊತ್ತಾಗಿದೆ.

ಹಿಂದೂಸ್ಥಾನಿ ಕಲಿಯಿರಿ

ಮದರಾಸು ಜ 23— ಪ್ರಾರ್ಥನಾ ಸಮಯದಲ್ಲಿ ಮಹಾತ್ಮಾ ಗಾಂಧಿಯವರು, ಜನರೆಲ್ಲರೂ ಹಿಂದೂಸ್ಥಾನಿ ಭಾಷೆಯನ್ನು ಅಭ್ಯಸಿಸಬೇಕೆಂದು ಹೇಳಿದರು

ವಾರ್ತಾತರಂಗ

ಬರೋಡಾದಲ್ಲಿ ಈ ತಿಂಗಳು 26 ರಿಂದ 28 ರವರೆಗೆ ನಡೆಯುವ ಅಖಿಲ ಭಾರತ ಪುಸ್ತಕ ಭಂಡಾರ ಸಮ್ಮೇಳನದ ಅಂಗವಾಗಿ ಒಂದು ಪುಸ್ತಕ ಪ್ರದರ್ಶನವು ನಡೆಯುವುದು.

ಸಂಯುಕ್ತ ರಾಷ್ಟ್ರಗಳ ಅಸೆಂಬ್ಲಿಯ ಕಾರ್ಯದರ್ಶಿಗಳಿಗೆ ವರ್ಷಕ್ಕೆ 10 ಸಾವಿರ ಪೌಂಡುಗಳು ಕೊಡತಕ್ಕದ್ದೆಂದು ತೀರ್ಮಾನಿಸಲಾಗಿದೆ.

ಬೀಹಾರಿನಲ್ಲಿ 41 ಜನ ಕಾಂಗ್ರೆಸ್ ಉಮೇದುವಾರರು ಪ್ರತಿಸ್ಪರ್ಧಿ ಇಲ್ಲದೆ ಚುನಾಯಿತರಾಗಿದ್ದಾರೆ.

ಅಮೇರಿಕಾದಲ್ಲಿ ಈಗ ಮುಷ್ಕರದಲ್ಲಿ ತೊಡಗಿರುವವರ ಸಂಖ್ಯೆ 1 ಮಿಲಿಯ 600 ಸಾವಿರವೆಂದು ಹೇಳಲಾಗಿದೆ.

ಆಜಾದ್ ಫೌಜಿನ ಪರಿಹಾರಕ್ಕೆ ಕಡೆಪಕ್ಷ 4 ಕೋಟಿ ರೂಪಾಯಿಗಳಾದರೂ ಬೇಕೆಂದು ಷಾ ನವಾಜರು ಕಲ್ಕತ್ತಾದಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಹೆಚ್ಚು ಬೆಲೆಯ ನೋಟುಗಳ ಹಣವನ್ನು ಹಣವನ್ನು ರಿಜರ್ವ್ ಬ್ಯಾಂಕಿನವರು ಏನೊಂದೂ ಅಡ್ಡಿ ಆತಂಕವಿಲ್ಲದೆ ಪಾವತಿ ಮಾಡುವಂತೆ ಹುಕುಂ ಪಡೆಯಲು ಹಾಕಿದ್ದ ಅರ್ಜಿಯನ್ನು ಬೊಂಬಾಯಿ ಕೋರ್ಟು ಜಡ್ಜರು ವಜಾಮಾಡಿಬಿಟ್ಟರು.

ನಾಜಿಗಳು ಯೂರೋಪಿನಲ್ಲಿಯ ಆಸ್ತಿಪಾಸ್ತಿ ಲೂಟಿಮಾಡಲು ಗೋರಿಂಗನ ಅನುಮತಿಯಂತೆ ಒಂದು ವ್ಯವಸ್ಥಿತ ಏರ್ಪಾಡಿದ್ದಿತೆಂದು ನ್ಯೂರೆಂಬರ್ಗ್ ವಿಚಾರಣೆಯಲ್ಲಿ ಹೊರಪಟ್ಟಿದೆ.

ಕಾಶಿಯ ಜಿಲ್ಲಾ ಜೈಲಿನಿಂದ ರಾಜಕೀಯ ಖೈದಿಗಳನ್ನು ಎಳೆದುಕೊಂಡು ಬಂದ ವ್ಯವಹಾರದಲ್ಲಿ ಜಿಲ್ಲಾ ಜಡ್ಜರು ಸಾಕ್ಷಿಯಿತರಾಗಿದ್ದಾರೆ.

ಮದರಾಸಿಗೆ ಬಂದಿರುವ ಪಾರ್ಲಿಮೆಂಟರಿ ನಿಯೋಗದ ಸದಸ್ಯ ಮಿಸೆಸ್ ನಿಕಲ್‌ರವರ ಉಡುಪಿನ ಪೆಟ್ಟಿಗೆಯೇ ಮಾಯವಾಗಿದೆಯಂತೆ

ಜಾವಾಕ್ಕೆ ಡೊಮಿನಿಯನ್ ಸ್ಟೇಟಸ್ ಒಪ್ಪಿಗೆ ಇಲ್ಲವೆಂಡು ಅಲ್ಲಿಯ ಮುಖ್ಯಮಂತ್ರಿಗಳ ಹೇಳಿಕೆಯಾಗಿದೆ.

ಎರವಲಾಗಿ ಕೊಟ್ಟ ದುರ್ಬೀನು ಮತ್ತು ದಿಕ್ಬಕ್ಕಗಳ ವಾಪಸು

ನವ ದೆಹಲಿ ಜ 21— ಸರ್ಕಾರದ 1940 ರ ಅರಿಕೆಯ ಪ್ರಕಾರ ಎರವಲಾಗಿ ಕೊಟ್ಟಿದ್ದ ದುರ್ಬೀನು ಮತ್ತು ದಿಗ್ಬಕ್ಕ ಮುಂತಾದುವನ್ನು ಆಯಾ ಮೂಲೀಕರಿಗೆ ವಾಪಸು ಕೊಡಲಾಗುವುದು. ಸಾಧ್ಯವಾದ ಮಟ್ಟಿಗೂ ಅವರು ಕೊಟ್ಟ ಸಾಮಾನುಗಳನ್ನೇ ಹಿಂದಿರುಗಿಸಲು ಪ್ರಯತ್ನಿಸಲಾಗುವುದು. ಹಾಗಿಲ್ಲದಿದ್ದರೆ ಕೈಲಾದ ಮಟ್ಟಿಗೂ ಪರಿಸಮವಾದುದನ್ನು ಹುಡುಕಿಕೊಡಲಾಗುವುದು ಮೊ ಲೊಂದು ಸಾರಿ ಬರೆದುಕೊಂಡವರು ಮತ್ತೆ ಬರೆಯಬೇಕಾಗಿಲ್ಲ. ಅರ್ಜಿಯನ್ನು ನ್ಯೂ ಡೆಲ್ಲಿಯಲ್ಲಿನ ಮಾಸ್ಟರ್ ಜನರಲ್ ಆಫ್ ದಿ ಆರ್ಡಿನೆನ್ಸ್ ರವರಿಗೆ ಕಳುಹಿಸಬೇಕು.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ವ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಫಂಡ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

Mysore City Municipality

(Works Department)

NOTICE dated 8 th January 1946

Sealed tenders will be received at the office of the Municipal Engineer up to 4 p. m. on 30--1--46 for constructing a Sheep Slaughter House at Kesare, Mysore. The work is estimated to cost about Rs. 50,000. Each tender must be accompanied by a deposit of Rs. 2,500 in cash or by a cheque on the Bank of Mysore Ltd. Design, Specification and details of work are available in the Office of the Municipal Enginer, Mysore. The supply of required quantities of cement and steel will be arranged by this office if required. For other rules, please see the Office Notice Board.

R. L. Raju
Municipal Engineer

At Ranjit

NAIMA

ಅಶೋಕ ಕುಮಾರ್, ವೀಣಾ, ಸಿತಾರ ಹಾತ್ಯವಹಿಸಿರುವ

ನಜ್ರ

ಪ್ರತಿ ದಿನ 3 ಆಟಗಳು

ಹಸರ್ ಬೆಟ್ಟದಪುರದ ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

At Opera—

6 ನೇ ವಾರ

ತ್ಯಾಗರಾಜ ಭಾಗವತರ್ — ನಾಗಯ್ಯ ಕನ್ನಾಂಬಾ ಪಾತ್ರವಹಿಸಿರುವ

ಅಶೋಕ ಕುಮಾರ

Morning Shows

faom 25—1—46

It Ain't Hay

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ರಕವದಿಗೆ – ಧಾತುಪುಷ್ಟಿಗೆ ಸಂಜೀವನ

ತಕ್ಕಿ ಸುಧಾ

ಬೆಲೆ ಡಬ್ಬಿ ೧ ಕ್ಕೆ ೩೦ ಪೈಸೆ ಮಾತ್ರವೆ.

ಸೇಲ್ಸ್ — ಕೃಷ್ಣ, ೧೦೬೭ ಚಾಮರಾಜಪುರಂ, ಮೈಸೂರು